ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 06-02-1976.

# *ಬಾಪ್‌ದಾದಾರವರ ಸಹಯೋಗಿ- ರೈಟ್ ಹ್ಯಾಂಡ್ ಮತ್ತು ಲೆಫ್ಟ್ ಹ್ಯಾಂಡ್.*

(बाबा के सहयोगी - राइट हैण्ड और लेफ्ट हैण्ड)

ಇಂದು ಬಾಪ್‌ದಾದಾರವರು ಎಲ್ಲಾ ಮಕ್ಕಳನ್ನು ವಿಶೇಷವಾಗಿ ತನ್ನ ಸಹಯೋಗಿಗಳ ರೂಪದಲ್ಲಿ ನೋಡುತ್ತಿದ್ದಾರೆ. ತಂದೆಯ ಸಹಯೋಗಿ ಸ್ವರೂಪದ ತಮ್ಮ ನೆನಪಾರ್ಥವನ್ನು ತಿಳಿದಿದ್ದೀರಾ ಅಥವಾ ನೋಡಿದ್ದೀರಾ? ಯಾವುದಾಗಿದೆ? ಸಹಯೋಗಿ ಸ್ವರೂಪವನ್ನು ಭುಜಗಳ ರೂಪದಲ್ಲಿ ತೋರಿಸಲಾಗಿದೆ. ಹೇಗೆ ಶರೀರದ ವಿಶೇಷವಾದ ಕಾರ್ಯಕರ್ತ ಭುಜವಾಗಿದೆಯೋ ಹಾಗೆಯೇ ಬಾಪ್‌ದಾದಾರವರ ಕರ್ತವ್ಯದಲ್ಲಿ ಕಾರ್ಯಕರ್ತನಾಗಿ ನಿಮಿತ್ತರೂಪದಲ್ಲಿ ತಾವೆಲ್ಲಾ ಮಕ್ಕಳಾಗಿದ್ದೀರಿ. ಸದಾ ತಂದೆಯ ಸಹಯೋಗಿ ಅರ್ಥಾತ್ ಸ್ವಯಂನ್ನು ತಂದೆಯ ಭುಜಗಳೆಂದು ತಿಳಿದು ಕಾರ್ಯವನ್ನು ಮಾಡುತ್ತೀರಾ? ಭುಜಗಳಲ್ಲಿಯೂ ಸಹ ರೈಟ್(ಬಲ) ಮತ್ತು ಲೆಫ್ಟ್(ಎಡ) ಇರುತ್ತದೆ. ಈ ರೀತಿ ಕರ್ತವ್ಯದಲ್ಲಿ, ಸದಾ ಯಥಾರ್ಥರೂಪದಲ್ಲಿ ಜೊತೆಯನ್ನು ನಿಭಾಯಿಸುವಂತಹ ಜೊತೆಗಾರರನ್ನು ಅಥವಾ ಸಹಯೋಗಿಗಳಿಗೇ ಹೇಳಲಾಗುತ್ತದೆ - ಇವರು ನಮ್ಮ ರೈಟ್ ಹ್ಯಾಂಡ್ (ಬಲಭುಜ) ಆಗಿದ್ದಾರೆ ಅಂದಮೇಲೆ ಒಂದು ರೈಟ್ ಹ್ಯಾಂಡ್ ಆಗಿದೆ. ಇನ್ನೊಂದು ಲೆಫ್ಟ್ ಹ್ಯಾಂಡ್ ಆಗಿದೆ ಆದರೆ ಸಹಯೋಗಿಯಂತು ಎರಡೂ ಭುಜಗಳಾಗಿರುತ್ತವೆ ಆದ್ದರಿಂದ ಸಾಕಾರ ಬ್ರಹ್ಮಾತಂದೆಯ ಅನೇಕ ಭುಜಗಳು ಪ್ರಸಿದ್ಧವಾಗಿದ್ದಾರೆ. ರೈಟ್ ಹ್ಯಾಂಡ್' ಎಂದು ಯಾರಿಗೆ ಹೇಳಲಾಗುತ್ತದೆ? ಎಲ್ಲರೂ ಹ್ಯಾಂಡ್(ಭುಜ) ಆಗಿದ್ದೀರಿ. ಭುಜಗಳಿಲ್ಲದೆ ಯಾವುದೇ ಕಾರ್ಯವು ಸಿದ್ಧವಾಗಲು ಸಾಧ್ಯವಿಲ್ಲ ಆದ್ದರಿಂದ ಈ ಸಾಕಾರಿ ಪ್ರಪಂಚದಲ್ಲಿ ಹೇಳಿಕೆಯೂ ಇದೆ- ಈ ಕಾರ್ಯದಲ್ಲಿ ಬೆರಳನ್ನು ಕೊಡುವುದು ಅಥವಾ ಈ ಕಾರ್ಯದಲ್ಲಿ ಕೈಚಾಚುವುದು. ಅಂದಮೇಲೆ ಕೈ ಅರ್ಥಾತ್ ಬಾಹುಗಳ ಅಥವಾ ಬೆರಳಿನ ಚಿಹ್ನೆಯು ಸಹಯೋಗದ್ದಾಗಿದೆ. ಎಲ್ಲರೂ ಸಹಯೋಗಿಯಾಗಿದ್ದೀರಿ ಆದರೆ ನಂಬರ್ ವಾರ್ ಆಗಿರುತ್ತೀರಿ.

ರೈಟ್ ಹ್ಯಾಂಡ್ (ಬಲಭುಜ)ನ ವಿಶೇಷತೆಯು ಸದಾ ಸ್ವಚ್ಛ ಅರ್ಥಾತ್ ಶುದ್ಧ ಮತ್ತು ಶ್ರೇಷ್ಠವಾಗಿದೆ. ಹೇಗೆ ಯಾವುದೇ ಶ್ರೇಷ್ಠ ಅಥವಾ ಶುದ್ಧಕಾರ್ಯವನ್ನು ಶರೀರದ ರೈಟ್ ಹ್ಯಾಂಡ್‌ನ ಮೂಲಕವೇ ಮಾಡಲಾಗುತ್ತದೆ. ಅದೇರೀತಿ ಬಾಪ್‌ದಾದಾರವರ ಸಹಯೋಗಿ ರೈಟ್ ಹ್ಯಾಂಡ್ ಮಕ್ಕಳು ಸದಾ ಮಾತಿನಲ್ಲಿ, ಕರ್ಮದಲ್ಲಿ ಮತ್ತು ಸಂಪರ್ಕದಲ್ಲಿ ಶ್ರೇಷ್ಠ ಮತ್ತು ಶುದ್ಧ ಅರ್ಥಾತ್ ಪವಿತ್ರವಾಗಿರುತ್ತಾರೆ ಅರ್ಥಾತ್ ಸ್ವಯಂನ್ನು ಸದಾ ಶ್ರೇಷ್ಠಕಾರ್ಯಾರ್ಥವಾಗಿ ನಿಮಿತ್ತನೆಂದು ತಿಳಿದು ನಡೆಯುತ್ತಾರೆ. ಹೇಗೆ ಭುಜಗಳ ಮೂಲಕ ಕಾರ್ಯವನ್ನು ಮಾಡಿಸುವಂತಹ ಶಕ್ತಿಯು ಆತ್ಮನಾಗಿದೆ, ಭುಜವು ಮಾಡುವಂತದ್ದಾಗಿದೆ ಮತ್ತು ಆತ್ಮವು ಮಾಡಿಸುವಂತದ್ದಾಗಿದೆ ಹಾಗೆಯೇ ರೈಟ್ ಹ್ಯಾಂಡ್ ಸಹಯೋಗಿಯು ಸದಾ ತಮ್ಮನ್ನು ಮಾಡಿಸುವಂತಹ ತಂದೆಯನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುತ್ತಾ ನಿಮಿತ್ತವಾಗಿ ಮಾಡುವವನಾಗುತ್ತಾನೆ. ಸ್ವಯಂನ್ನು ಮಾಡಿಸುವವನೆಂದು ತಿಳಿಯುವುದಿಲ್ಲ ಆದ್ದರಿಂದ ಅವರ ಪ್ರತೀಕರ್ಮದಲ್ಲಿ ಭಿನ್ನತೆ, ನಿರಹಂಕಾರಿಯಾಗುವ ಹಾಗೂ ನಮ್ರತೆಯ ನವನಿರ್ಮಾಣದ ಶ್ರೇಷ್ಠತೆಯು ತುಂಬಿರುತ್ತದೆ. ಪ್ರತೀ ಸೆಕೆಂಡ್, ಪ್ರತೀ ಸಂಕಲ್ಪದಲ್ಲಿ ಸಂಪೂರ್ಣ ಪವಿತ್ರ ಅರ್ಥಾತ್ ಸ್ವಚ್ಛವಾಗಿರುತ್ತದೆ. ಅದಕ್ಕೆ ಸತ್ಯತೆ ಮತ್ತು ಸ್ವಚ್ಛತೆಯೆಂದು ಹೇಳಲಾಗುತ್ತದೆ. ರೈಟ್ ಹ್ಯಾಂಡ್ ವಿಶೇಷವಾಗಿ 100%. ಹಾಗೆಯೇ ಯಾವುದೇ ವಿಶೇಷವಾದ ಹೊರೆಯನ್ನು ಹೋರುವುದರಲ್ಲಿ ರೈಟ್ ಹ್ಯಾಂಡೇ ಮಾಡುತ್ತದೆ. ಹಾಗೆಯೇ ರೈಟ್ ಹ್ಯಾಂಡ್ ಸಹಯೋಗಿ ಆತ್ಮವು ಸದಾ ವಿಶ್ವಕಲ್ಯಾಣಿ, ವಿಶ್ವಪರಿವರ್ತಕ ಕಾರ್ಯದ ಜವಾಬ್ದಾರಿಯ ಹೊರೆ ಅಂದರೆ ಜವಾಬ್ದಾರಿಯನ್ನು ಅತಿ ಸಹಜವಾಗಿ ತೆಗೆದುಕೊಳ್ಳುತ್ತಾರೆ ಅರ್ಥಾತ್ ಅವರು ತಮ್ಮನ್ನು ಜವಾಬ್ದಾರನೆಂದು ಅನುಭವ ಮಾಡುತ್ತಾರೆ, ಸದಾ ಮಾಸ್ಟರ್ ಸರ್ವಶಕ್ತಿವಂತ ಸ್ಥಿತಿಯ ಅನುಭವ ಮಾಡುತ್ತಾರೆ. ರೈಟ್ ಹ್ಯಾಂಡ್‌ನ ವಿಶೇಷತೆಯಾಗಿದೆ - ಕಾರ್ಯದ ತೀವ್ರತೆಯಲ್ಲಿ ಅರ್ಥಾತ್ ವೇಗದಲ್ಲಿ ತೀವ್ರತೆಯಿರುತ್ತದೆ. ಅದೇರೀತಿ ರೈಟ್ ಹ್ಯಾಂಡ್ ಸಹಯೋಗಿ ಆತ್ಮವೂ ಸಹ ಪ್ರತೀ ಸಬ್ಜೆಕ್ಟ್ ನ ಧಾರಣೆಯಲ್ಲಿ

ಅಥವಾ ಪ್ರತ್ಯಕ್ಷಸ್ವರೂಪವನ್ನು ಪ್ರಕಟಗೊಳಿಸುವುದರಲ್ಲಿ ತೀವ್ರಪುರುಷಾರ್ಥಿಯಾಗಿರುತ್ತಾರೆ. ಸದಾ ಎವರೆಡಿಯಾಗಿರುತ್ತಾರೆ ಇದು ರೈಟ್ ಹ್ಯಾಂಡ್‌ನ ವಿಶೇಷತೆಯಾಗಿದೆ.

ಲೆಫ್ಟ್ ಹ್ಯಾಂಡ್ ಸದಾ ಸಹಯೋಗಿಯಾಗಿರುತ್ತಾರೆ ಆದರೆ ಸ್ವಚ್ಛತೆಯ ಜೊತೆಜೊತೆಗೆ ಅಸ್ವಚ್ಛತೆ ಅರ್ಥಾತ್ ಸಂಕಲ್ಪ, ವಾಣಿ ಮತ್ತು ಕರ್ಮದಲ್ಲಿ ಕೆಲವೊಮ್ಮೆ ಅಲ್ಪಸ್ವಲ್ಪ ಅಶುದ್ಧಿಯೂ ಉಳಿದುಕೊಂಡುಬಿಡುತ್ತದೆ ಅರ್ಥಾತ್ ಸಂಪೂರ್ಣವಾದ ಸ್ವಚ್ಛತೆಯಿರುವುದಿಲ್ಲ. ಪುರುಷಾರ್ಥದ ತೀವ್ರತೆಯಲ್ಲಿಯೂ ಸಹ ತೀವ್ರತೆಯು ಕಡಿಮೆಯಿರುತ್ತದೆ. ಮಾಡುತ್ತೇನೆ, ಯೋಚಿಸುತ್ತೇನೆ ಎನ್ನುತ್ತಾರೆ ಲೆಫ್ಟ್ ಅರ್ಥಾತ್ ಲೇಟ್ (ನಿಧಾನ) ಮಾಡುತ್ತಾರೆ. ಜೊತೆ ಕೊಡುತ್ತೇವೆ. ಕಾರ್ಯವನ್ನು ಮಾಡುತ್ತೇವೆ ಆದರೆ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುವುದರಲ್ಲಿ ಸಾಹಸವನ್ನಿಡುವುದಿಲ್ಲ. ಸದಾ ಉಲ್ಲಾಸ, ಧೈರ್ಯವನ್ನಿಡುತ್ತಾರೆ ಆದರೆ ನಿರಾಧಾರರಾಗುವುದಿಲ್ಲ. ಅವರ ಸ್ಥಿತಿಯು ಬಹಳಷ್ಟು ಸಮಯದಲ್ಲಿ ವಕೀಲ್ ಅರ್ಥಾತ್ ಲಾಯರ್ ನದಾಗಿರುತ್ತದೆ. ಹೆಚ್ಚಿನದಾಗಿ ಕಾಯಿದೆಗಳನ್ನೇ ಯೋಚಿಸುತ್ತಾರೆ. ಆದರೆ ಕಡಿಮೆ ಲಾಭವನ್ನು ಪಡೆಯುತ್ತಾರೆ. ಸ್ವಯಂಗೆ ಸ್ವಯಂ ನ್ಯಾಯಾಧೀಶನಾಗಲು ಸಾಧ್ಯವಿಲ್ಲ. ಪ್ರತಿಯೊಂದು ಚಿಕ್ಕ ಮಾತಿನಲ್ಲಿಯೂ ಸಹ ಅಂತಿಮ ನ್ಯಾಯಕ್ಕಾಗಿ ನ್ಯಾಯಾಧೀಶನ ಅವಶ್ಯಕತೆಯ ಅನುಭವ ಮಾಡುತ್ತಾರೆ. ರೈಟ್ ಹ್ಯಾಂಡ್ ಲಾಫುಲ್ ಆಗಿರುತ್ತದೆ, ನ್ಯಾಯಾಧೀಶನಾಗಿರುತ್ತದೆ ಆದರೆ ಲಾಯರ್ ಆಗಿರುವುದಿಲ್ಲ.

ಈಗ ತಮ್ಮನ್ನು ಪರಿಶೀಲನೆ ಮಾಡಿಕೊಳ್ಳಿ ರೈಟ್ ಹ್ಯಾಂಡ್ ಆಗಿದ್ದೀರಾ ಅಥವಾ ಲೆಫ್ಟ್ ಹ್ಯಾಂಡ್ ಆಗಿದ್ದೀರಾ? ಲಾಯರ್ ಆಗಿದ್ದೀರಾ ಅಥವಾ ಲಾ-ಫುಲ್ ಆಗಿದ್ದೀರಾ? ಬಾಪ್‌ದಾದಾರವರಿಗಂತು ಎರಡೂ ಸಹಯೋಗಿಗಳಾಗಿವೆ. ಸದಾ ತಮ್ಮನ್ನು ಸಹಯೋಗಿಯೆಂದು ತಿಳಿಯುವುದರಿಂದ ಸಹಜಯೋಗಿಯಾಗಿಬಿಡುತ್ತೀರಿ. ಮಾಡಿಸುವಂತಹ ಬಾಪ್ ದಾದಾರವರಿಗೆ ನಿಮಿತ್ತವೆಂದು ತಿಳಿದು ಮಾಡುತ್ತಾ ನಡೆಯುವುದರಿಂದ ಸದಾ ನಿಶ್ಚಿಂತ ಮತ್ತು ಹರ್ಷಿತರಾಗಿರುತ್ತಾರೆ.

ಅಂದಮೇಲೆ ಇಂದು ಬಾಪ್‌ದಾದಾರವರು ತನ್ನ ಸಹಯೋಗಿ ಭುಜಗಳನ್ನು ನೋಡುತ್ತಿದ್ದಾರೆ. ಭುಜಗಳಂತು ಎಲ್ಲರೂ ಆಗಿದ್ದೀರಲ್ಲವೆ? ಎಲ್ಲರ ಹೃದಯದಲ್ಲಿ ಸದಾ ವಿಶ್ವದ ನವನಿರ್ಮಾಣ ಮಾಡುವಂತಹ ವಿಶ್ವಪರಿವರ್ತಕರಾಗಿದ್ದೇವೆ ಎಂಬ ಈ ಶುಭಸಂಕಲ್ಪವಿರುತ್ತದೆಯೇ? ವಿಶ್ವದಪರಿವರ್ತನೆಗೆ ಮೊದಲು ಸ್ವಯಂನ್ನು ಸಂಪೂರ್ಣವಾಗಿ ಪರಿವರ್ತನೆ ಮಾಡಿಕೊಂಡಿದ್ದೇನೆ ಎನ್ನುತ್ತೀರಾ? ಸ್ವಯಂನ ಪರಿವರ್ತನೆಯಲ್ಲಿ ಎಷ್ಟು ಕೊರತೆಯಿರುತ್ತದೆಯೋ ಅಷ್ಟೇ ವಿಶ್ವಪರಿವರ್ತನೆಯ ಗತಿಯು ಕಡಿಮೆಯಿರುತ್ತದೆ. ಸ್ವಯಂನ ಪರಿವರ್ತನೆಯಿಂದಲೇ ಸಮಯದ ಪರಿವರ್ತನೆಯನ್ನು ಮಾಡಲು ಸಾಧ್ಯವಾಗುತ್ತದೆ. ಸ್ವಯಂನ್ನು ನೋಡುತ್ತೀರೆಂದರೆ ಸ್ವತಹವಾಗಿ ತಿಳಿದುಬರುತ್ತದೆ. ಪರಿವರ್ತನೆಯ ಸಮಯದ ಗಡಿಯಾರವು ತಾವಾಗಿದ್ದೀರಿ ಅಂದಮೇಲೆ ಸ್ವಯಂನ ಗಡಿಯಾರದಲ್ಲಿ ಸಮಯವನ್ನು ನೋಡಿರಿ. ಇಡೀ ವಿಶ್ವದ ಅರ್ಥಾತ್ ಆತ್ಮರ ಗಮನವು ಈಗ ಇನ್ನೂ ಎಷ್ಟು ಸಮಯ ಉಳಿದುಕೊಂಡಿದೆ ಎಂದು ತಾವು ನಿಮಿತ್ತರಾಗಿರುವ ಸಮಯದ ಗಡಿಯಾರದಕಡೆ ಇದೆ. ಆದ್ದರಿಂದ ಈ ಹಳೆಯ ಪ್ರಪಂಚದ ಸಮಯವನ್ನು ಸಮಾಪ್ತಿ ಮಾಡಲು ನಿಮಿತ್ತರು ತಾವು ಸ್ವಯಂ ಆಗಿದ್ದೇವೆಂದು ತಿಳಿದುಕೊಂಡು, ಸ್ವಯಂನ್ನು ಸಂಪನ್ನ ಮಾಡಿಕೊಳ್ಳಿರಿ. ತಿಳಿಯಿತೆ? ಒಳ್ಳೆಯದು-

**ಇಂತಹ ವಿಶ್ವಪರಿವರ್ತಕ, ರಾತ್ರಿಯನ್ನು ಹಗಲಿನಲ್ಲಿ ಪರಿವರ್ತನೆ ಮಾಡುವಂತಹ, ಹಳೆಯದನ್ನು ಹೊಸದನ್ನಾಗಿ ಮಾಡುವಂತಹ ಬಾಪ್‌ದಾದಾರವರ ಶ್ರೇಷ್ಠ ಸಹಯೋಗಿ ಅರ್ಥಾತ್ ಸದಾ ಸಹಜಯೋಗಗಳು, ಇಂತಹ ಸದಾ ವಿಶ್ವದ ಹಿತಕಾರಿ, ವಿಶ್ವಕಲ್ಯಾಣಿ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 06-02-1976.

***ಬಾಪ್‌ದಾದಾರವರ ಸಹಯೋಗಿಗಳು - ರೈಟ್ ಹ್ಯಾಂಡ್ ಮತ್ತು ಲೆಫ್ಟ್ ಹ್ಯಾಂಡ್***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ**.

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಕರ್ತವ್ಯದಲ್ಲಿ ಕಾರ್ಯಕರ್ತನಾಗಿ ಸದಾ ಯಥಾರ್ಥ ರೂಪದಲ್ಲಿ ಸಹಯೋಗಿಯಾಗಿರುವ ರೈಟ್ ಹ್ಯಾಂಡ್ ಆಗಿದ್ದೇನೆ.

2. ನನ್ನ ಪ್ರತಿ ಕರ್ಮದಲ್ಲಿ ಅತೀತ ಸ್ಥಿತಿ, ನಮ್ರತೆ, ನವನಿರ್ಮಾಣದ ಶ್ರೇಷ್ಠತೆ ತುಂಬಿದೆ.

3. ತಂದೆಗೆ ರೈಟ್ ಹ್ಯಾಂಡ್ ಆಗಿರುವ ನನ್ನ ಮಾತು, ಕರ್ಮ, ಸಂಪರ್ಕ, ಶ್ರೇಷ್ಠವಾಗಿ, ಶುದ್ಧವಾಗಿ ಅರ್ಥಾತ್ ಪವಿತ್ರವಾಗಿ ಇವೆ.

4. ನಾನು ಪ್ರತಿಕ್ಷಣ, ಪ್ರತಿ ಸಂಕಲ್ಪ, ಸಂಪೂರ್ಣ ಪವಿತ್ರವಾಗಿ (ಸತ್ಯತೆ, ಸ್ವಚ್ಛತೆ) ಇದ್ದೇನೆ.

5. ತಂದೆಗೆ ಸಹಯೋಗಿಯಾದ ನಾನು ಸದಾ ವಿಶ್ವಕಲ್ಯಾಣ, ವಿಶ್ವ ಪರಿವರ್ತನೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ.

6. ನಾನು ಪ್ರತೀ ಸಬ್ಜೆಕ್ಟ್ ನ ಧಾರಣೆ, ಆಚರಣೆಯಲ್ಲಿ ತೀವ್ರ ಪುರುಷಾರ್ಥಿ ಮತ್ತು ಎವರೆಡಿ(ಸದಾ ಸಿದ್ಧ) ಸ್ವರೂಪ.

7. ನಾನು ನಿಯಮಪೂರ್ವಕವಾಗಿ ಲಾಫುಲ್ ನ್ಯಾಯಾಧೀಶನಾಗಿ ಇರುವ ರೈಟ್ ಹ್ಯಾಂಡ್.

8. ಮಾಡಿ ಮಾಡಿಸುವವರು ಬಾಬಾ ನಾನು ನಿಮಿತ್ತನು ಎಂದು ಭಾವಿಸಿ ಹರ್ಷಿತವಾಗಿ ನಿಶ್ಚಿಂತೆಯಿಂದ ಇದ್ದೇನೆ.

9. ನಾನು ಸ್ವ ಪರಿವರ್ತನೆಯಿಂದ ಸಮಯವನ್ನು ಪರಿವರ್ತನೆ ಮಾಡಿರುವ ಪರಿವರ್ತನಾ ಸಮಯದ ಗಡಿಯಾರವಾಗಿದ್ದೇನೆ.

10. ನಾನು ಹಳೆಯ ಪ್ರಪಂಚದ ಸಮಯವನ್ನು ಸಮಾಪ್ತಿ ಮಾಡಲು ನಿಮಿತ್ತವಾಗಿ ಭಾವಿಸಿ ಸ್ವಯಂ ಅನ್ನು ಸಂಪನ್ನವಾಗಿ ತಯಾರು ಮಾಡಿಕೊಂಡಿದ್ದೇನೆ.